**ದಿನಾಂಕ 16.10.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : 1 ನೇ ಪ್ರತಿವಾದಿ ಪರ ಶ್ರೀ. MVP ವಕೀಲರಿಂದ:**

ಈ ದಾವೆಯನ್ನು ಯಾವ ಉದ್ದೇಶಕ್ಕಾಗಿ ಹಾಕಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ಪ್ರತಿವಾದಿಯು ನಮ್ಮ ಜಮೀನನ್ನು ಒತ್ತುವರಿ ಮಾಡಿರಬಹುದು, ಅವರು ನನಗೆ ಸರ್ವೆ ಮಾಡಿಸಲು ಅಡ್ಡಿ ಪಡಿಸಿರುವ ಕಾರಣ ಈ ದಾವೆಯನ್ನು ಹಾಕಿರುವುದಾಗಿ ನುಡಿಯುತ್ತಾರೆ. ಸರ್ವೆ ನಂ. 166/2 ರನ್ನು ಸರ್ವೆ ಮಾಡಿಸಲು ಪ್ರತಿವಾದಿ ಅಡ್ಡಿ ಪಡಿಸಿರುತ್ತಾರೆ. ಸರ್ವೆ ಮಾಡಿಸುವ ಸಮಯದಲ್ಲಿ ಯಾರು ತೊಂದರೆ ಕೊಟ್ಟರು ಅವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು 1 ನೇ ಪ್ರತಿವಾದಿ ತೊಂದರೆ ಕೊಟ್ಟಿರುವ ಕಾರಣ ಮಾಡಿರುವುದಾಗಿ ನುಡಿಯುತ್ತಾರೆ. 1 ನೇ ಪ್ರತಿವಾದಿಯ ಜಮೀನು ಎಲ್ಲಿದೆ ಎಂದು ವಿಚಾರ ಮಾಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು 1 ನೇ ಪ್ರತಿವಾದಿಯು ಸರ್ವೆ ನಂ. 166/2 ನನ್ನ ಜಮೀನು ನೀವು ಯಾಕೆ ಸರ್ವೆ ಮಾಡಿಸುತ್ತೀರಿ ಎಂದು ಪ್ರಶ್ನೆ ಕೇಳಿರುತ್ತಾರೆ.

ಸರ್ವ ನಂ. 166/2 ರ ದಾಖಲೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆಯಾ ಎಂದು ಪರಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ. 166/2 ರ ಸಂಬಂಧ ಯಾವುದೇ ದಾಖಲೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದಿಲ್ಲ , ಆದರೂ ಸಹಿತ ನೀವು ಉದ್ದೇಶ ಪೂರ್ವಕವಾಗಿ 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ಅವರನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿರುತ್ತೀರಿ ಎಂದರೆ ಸಾಕ್ಷಿದಾರರು ಅವರು ನನಗೆ ತೊಂದರೆ ಕೊಟ್ಟ ಕಾರಣ ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದು ನುಡಿಯುತಾರೆ. ಪೋಲಿಸ್ ಠಾಣೆಯಲ್ಲಿ 1 ನೇ ಪ್ರತಿಜವಾದಿಯ ವಿರುದ್ಧ ದೂರನ್ನು ಸಲ್ಲಿಸಿರುತ್ತೇನೆ. ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 1 ನೇ ಪ್ರತಿವಾದಿ ಸರ್ವೆ ಮಾಡುವ ಸಮಯದಲ್ಲಿ ಊರಿನಲ್ಲಿ ಇರದಿದ್ದರೂ , ಅವರನ್ನು ಕೆಲಸ ದಿಂದ ತೆಗೆಯುವ ಉದ್ದೇಶದಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೀರಿ ಎಂದರೆ ಸರಿಯಲ್ಲ.

ಸರ್ವೆ ನಂ. 166/2 ರಲ್ಲಿ ಯಾರ ಬೆಳೆಯನ್ನು ಬೆಳೆಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಇತ್ತೀಚೆಗಷ್ಟೇ ನಮ್ಮ ತಂದೆಯಿಂದ ಖಾತೆ ಬದಲಾವಣೆ ಮಾಡಿಸಿಕೊಂಡು ಸರ್ವೆ ಮಾಡುವ ಸಮಯದಲ್ಲಿ 1 ನೇ ಪ್ರತಿವಾದಿ ತೊಂದರೆ ಕೊಟ್ಟಿರುವುದಾಗಿ ನುಡಿಯುತ್ತಾರೆ. ದಾವಾ ಸ್ವತ್ತು ಹೇಗೆ ಬಂತು ಎನ್ನುವ ಸಂಬಂಧ ಯಾವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಇಸಿ , ಪಹಣಿಯನ್ನು ಹಾಜರುಪಡಿಸಿರುವುದಾಗಿ ನುಡಿಯುತ್ತಾರೆ.

ಸರ್ವೆ ನಂ. 166/2 ಪೋಡಿ ಆಗುವ ಮುಂಚೆ ನಿಮ್ಮ ತಾತನವರಿಗೆ ಹೇಗೆ ಸದರಿ ಸ್ವತ್ತು ಬಂತು ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದು ಪಿತ್ರಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ. ಸದರಿ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎನ್ನುವ ಸಂಬಂಧ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಿ ಎಂದರೆ ಹೌದು ಎಂದು ನುಡಿಯುತ್ತಾರೆ. ಸರ್ವೆ ನಂ. 166/2 ಪೋಡಿ ಆಗುವ ಮುಂಚೆ ಹಳೆಯ ಮೂಲ ಸರ್ವೆ ನಂಬರ್ ಯಾವುದು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 166/2 ಮೂಲತಃ ಎಷ್ಟು ವಿಸ್ತೀರ್ಣ ಇತ್ತು ಎಂಬ ಪ್ರಶ್ನೆಗೆ ಸಾಕ್ಷಿದಾರರು 93 ಗುಂಟೆ ಇತ್ತು ಎಂದು ನುಡಿಯುತ್ತಾರೆ.

ಸರ್ವೆ ನಂ. 166 ರಲ್ಲಿ ಒಟ್ಟಾರೆಯಾಗಿ 3 ಎಕರೆ 1 ಗುಂಟೆ ಜಮೀನು ಇತ್ತು ಎಂದರೆ ಗೊತ್ತಿಲ್ಲ. ಯಾವಾಗ ವಿಭಾಗ ಆಗಿರುತ್ತದೆ ಎಂದರೆ ಸಾಕ್ಷಿದಾರರು 1995 ರಲ್ಲಿ ವಿಭಾಗ ಆಗಿರುತ್ತದೆ ಎಂದು ನುಡಿಯುತ್ತಾರೆ. ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ವಿಭಾಗ ಪತ್ರದಂತೆ 1 ನೇ ಮಗ ನನ್ನ ತಂದೆಗೆ 24 ಗುಂಟೆ , 2ನೇ ಮಗನಿಗೆ 23 ಗುಂಟೆ , 3 ನೇ ಮಗನಿಗೆ 23 ಗುಂಟೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಮೂಲ ಸರ್ವೆ ನಂ. 166/2 ರಲ್ಲಿ ಗ್ರಾಮ ಠಾಣಕ್ಕೆ ಎಂದು ಹೇಳಿ 28 ಗುಂಟೆ ಯನ್ನು ಸರ್ಕಾರ ಪಡೆದಿರುತ್ತದೆ ಎಂದರೆ ಸಾಕ್ಷಿದಾರರು ಹೌದು ಎಂದು ನುಡಿಯುತ್ತಾರೆ. ಸದರಿ 28 ಗುಂಟೆ ದಾವಾ ಸ್ವತ್ತು ಆಗಿರುತ್ತದೆ ಎಂದರೆ ಸರಿಯಲ್ಲ, ಪಹಣಿ ನನ್ನ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. ಗ್ರಾಮ ಠಾಣಕ್ಕೆ ಸೇರಿದ್ದರ ಸಂಬಂಧ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಯಾವ ವರ್ಷದಿಂದ ನಿಮ್ಮ ತಾತ , ತಂದೆಯ ಹೆಸರಿನಲ್ಲಿ ಪಹಣಿ ಬಂದಿರುತ್ತದೆ ಎಂದರೆ ಸಾಕ್ಷಿದಾರರು 2015 ರಿಂದ ನಮ್ಮ ತಂದೆಯ ಹೆಸರಿನಲ್ಲಿ ಪಹಣಿ ಬಂದಿರುತ್ತದೆ

ಎಂದು ನುಡಿಯುತ್ತಾರೆ. ಯಾವ ವರ್ಷದಿಂದ ನಿಮ್ಮ ತಾತನ ಹೆಸರಿನಲ್ಲಿ ಪಹಣಿ ಬಂದಿರುತ್ತದೆ ಎಂದರೆ ಗೊತ್ತಿಲ್ಲ. 1959 ರಿಂದಲೂ ಸಹ ಸರ್ವೆ ನಂ. 166/2 ಸೈಯದ್ ಮಸ್ತಾನ್ ರವರ ಹೆಸರಿನಲ್ಲಿ ಇದೆ , ನೀವು ದಾಖಲೆಯನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ದಾವೆಯನ್ನು ಹಾಕಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತು 1967-68 ರ ನಂತರ ಸೈಯದ್ ಮಸ್ತಾನ್ ರವರಿಂದ ಸಂಬೇಗೌಡರ ಹೆಸರಿನಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ.

ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು 4 ಗುಂಟೆ ಜಮೀನನ್ನು ಖಾತೆ ಮಾಡಿಕೊಂಡಿರುತ್ತೀರಾ ಎಂದರೆ ಸರಿಯಲ್ಲ. ಕಾಳಯ್ಯ , ಜಯರಾಮು , ಮರಿಸ್ವಾಮಿ ರವರ ಹೆಸರಿನಲ್ಲಿ ಜಂಟಿ ಖಾತೆ ಸೃಷ್ಟಿ ಮಾಡಿಕೊಂಡಿರುತ್ತೀರಾ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಸರಿಯಾದ ದಾಖಲೆಗಳನ್ನು ಹಾಜರಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಮಗೆ ಯಾವುದೇ ಜಮೀನು ಇಲ್ಲದಿದ್ದರೂ ಸಹ 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹಾಕಿರುತ್ತೀರಿ ಎಂದರೆ ಸರಿಯಲ್ಲ. ನಿಪಿ- 3, 4, 6 ಇವೆಲ್ಲ ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೀರಿ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ